ವಿಜಯವಾಣಿ
ಕನ್ನಡಿಗರ ಧ್ವನಿ

# ಜೈನ್ ಸಮೂಹದ ಕ್ರೀಡಾ ಸಾಧಕರಿಗೆ ಸನ್ಮಾನ

## ■ ಗಗನ್‌ಗೆ 1.35 ಲಕ್ಷ ರೂ. ಬಹುಮಾನ ■ ಪ್ಯಾರಾಲಿಂಪಿಯನ್ ಶರತ್‌ಗೆ 1 ಲಕ್ಷ ರೂ.




**ಬೆಂಗಳೂರು:** ಲಂಡನ್ ಒಲಿಂಪಿಕ್ಸ್ ಈಜು ಸ್ಪರ್ಧೆಯಲ್ಲಿ ಭಾಗವಹಿಸಿದ್ದ ಗಗನ್ ಉಲ್ಲಾಳಮಠ್ ಮತ್ತು ಪ್ಯಾರಾಲಿಂಪಿಕ್ ಈಜು ಸ್ಪರ್ಧೆಯ ನಾಲ್ಕು ವಿಭಾಗಗಳಲ್ಲಿ ವೈಯಕ್ತಿಕ ಶ್ರೇಷ್ಠ ಪ್ರದರ್ಶನ ದಾಖಲಿಸಿದ ಶರತ್ ಎಂ ಗಾಯಕ್ವಾಡ್‌ಗೆ ಜೈನ್ ಸಮೂಹ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷ ಚೆನ್‌ರಾಜ್ ಜೈನ್ ತಲಾ 1 ಲಕ್ಷ ರೂ. ನಗದು ಬಹುಮಾನ ನೀಡಿ ಗೌರವಿಸಿದರು.

ಸೋಮವಾರ ನಡೆದ ಜೈನ್ ಸಮೂಹ ಶಿಕ್ಷಣ ಸಂಸ್ಥೆಗಳ ವಾರ್ಷಿಕ ಕ್ರೀಡಾ ಪ್ರಶಸ್ತಿ ವಿತರಣೆ ಸಮಾರಂಭದಲ್ಲಿ ಚೆನ್‌ರಾಜ್ ಜೈನ್ ಪ್ರಶಸ್ತಿಗಳನ್ನು ವಿತರಿಸಿದರು. ಸಿಂಗಾಪುರದಲ್ಲಿ ನಡೆದ ಒಲಿಂಪಿಕ್ಸ್ ಅರ್ಹತಾ ಸುತ್ತಿನ ಸ್ಪರ್ಧೆಗಳಲ್ಲಿ 1 ಬೆಳ್ಳಿ ಹಾಗೂ 1 ಕಂಚಿನ ಪದಕ ಸಾಧನೆ ಮಾಡಿದ ಈಜುಗಾರ್ತಿ ಸುರಭಿ ಟಿರಪೆಗೆ 25 ಸಾವಿರ ರೂ. ನಗದು ಬಹುಮಾನ ನೀಡಲಾಯಿತು. ಡಚ್ ಹಾಗೂ ಜರ್ಮನ್ ಓಪನ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಭಾಗವಹಿಸಿದ್ದಲ್ಲದೆ, ಪುಣೆಯಲ್ಲಿ ನಡೆದ -19 ವಯೋಮಿತಿ ಅಂತಾರಾಷ್ಟ್ರೀಯ ಚಾಂಪಿಯನ್‌ಷಿಪ್‌ನಲ್ಲಿ ಡಬಲ್ಸ್ ಪ್ರಶಸ್ತಿ ಗಳಿಸಿದ ಪೂರ್ವಿಶಾ ರಾಮ್‌ಗೆ 10 ಸಾವಿರ ರೂ. ಏಷ್ಯನ್ ಜೂನಿಯರ್ ಚೆಸ್ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನದ ಪದಕ ಗೆದ್ದ ಆಶ್ವಿನಿ ಜಯರಾಮ್‌ಗೆ 5 ಸಾವಿರ ರೂ. ನೀಡಲಾಯಿತು.

ಅಖಿಲ ಭಾರತ ವಿವಿ ಕ್ರೀಡಾಕೂಟದ ಈಜು ಸ್ಪರ್ಧೆಯಲ್ಲಿ ಜೈನ್ ವಿವಿಗೆ ಸಮಗ್ರ ಚಾಂಪಿಯನ್‌ಷಿಪ್ ಪ್ರಶಸ್ತಿ ಸಾಧನೆ ಮಾಡುವ ನಿಟ್ಟಿನಲ್ಲಿ 4 ಸ್ವರ್ಣ, 3 ಬೆಳ್ಳಿ ಪದಕ ಗೆದ್ದುಕೊಂಡ ಸುರಭಿ ಟಿರಪೆಗೆ 48 ಸಾವಿರ ರೂ., 3 ಸ್ವರ್ಣ, 2 ಬೆಳ್ಳಿ ಮತ್ತು 2 ಕಂಚಿನ ಪದಕಕ್ಕೆ ಕೊರಳೊಡ್ಡಿದ ಫರಿಯಾ ಝುಮಾನ್‌ಗೆ 38 ಸಾವಿರ ರೂ., 2 ಸ್ವರ್ಣ ತಲಾ ಒಂದೊಂದು ಬೆಳ್ಳಿ ಮತ್ತು ಕಂಚಿನ ಪದಕ ಗೆದ್ದ ಪೂರ್ವಾ ಶೆಟ್ಟಿಗೆ 24 ಸಾವಿರ ರೂ., 2 ಸ್ವರ್ಣ ಪದಕ ಸಾಧನೆ ಮಾಡಿದ ಲೇಖಾ ಕಾಂತ್‌ಗೆ 5 ಸಾವಿರ ರೂ. ಹಾಗೂ 3 ಸ್ವರ್ಣ, 2 ಬೆಳ್ಳಿ ಹಾಗೂ 2 ಕಂಚಿನ ಪದಕ ಗೆದ್ದ ಗಗನ್ ಉಲ್ಲಾಳಮಠ್‌ಗೆ 35 ಸಾವಿರ ರೂ. ನಗದು ಬಹುಮಾನ ನೀಡಲಾಯಿತು.

ದಕ್ಷಿಣ ವಲಯ ಕ್ರಿಕೆಟ್ ಟೂರ್ನಿಯಲ್ಲಿ ಚಾಂಪಿಯನ್ ಆದ ಜೈನ್ ವಿವಿ ಕ್ರಿಕೆಟ್ ತಂಡಕ್ಕೆ 48 ಸಾವಿರ ರೂ. ಅಲ್ಲದೆ, ದಕ್ಷಿಣ ವಲಯ ಪುರುಷರ ಟೆನಿಸ್ ತಂಡಕ್ಕೆ 30 ಸಾವಿರ ರೂ. ಹಾಗೂ ದಕ್ಷಿಣ ವಲಯ ಚಾಂಪಿಯನ್‌ಗಳಾದ ಮಹಿಳಾ ಟೆನಿಸ್ ತಂಡಕ್ಕೆ 16 ಸಾವಿರ ರೂ. ನಗದು ಬಹುಮಾನ ನೀಡಲಾಯಿತು.

### ಕ್ಲಾಸಿಗೆ ಬರಬೇಡಿ ಅಭ್ಯಾಸ ಮಾಡಿ



ಕ್ರೀಡಾಪಟುಗಳು ನಿತ್ಯ ತರಗತಿಗೆ ಬರುವುದರಿಂದ ಅವರ ತರಬೇತಿಗೆ ಅಡಚಣೆಯಾಗುತ್ತದೆ. ಆದ್ದರಿಂದ, ವಾರ್ಷಿಕ ಪರೀಕ್ಷೆಗೂ ಮುನ್ನ ಏರ್ಪಡಿಸಲಾಗುವ 30 ದಿನಗಳ ವಿಶೇಷ ತರಬೇತಿ ಕಾರ್ಯಕ್ರಮದಲ್ಲಿ ಪಾಲ್ಗೊಂಡರೆ ಸಾಕು. ಪರೀಕ್ಷೆಗೆ ಹಾಜರಾಗಲು ಅವರಿಗೆ ಅಗತ್ಯ ಹಾಜರಾತಿ ನೀಡಲಾಗುವುದು ಎಂದು ಜೈನ್ ಸಮೂಹ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷ ಚೆನ್‌ರಾಜ್ ಜೈನ್ ಹೇಳಿದರು. ಜೈನ್ ವಿಶ್ವವಿದ್ಯಾಲಯ ಕ್ರೀಡಾಪಟುಗಳಿಗೆಂದೇ ಪ್ರತ್ಯೇಕ ನಿಯಮಗಳನ್ನು ರೂಪಿಸಿದೆ. ವಾಣಿಜ್ಯ ವಿಭಾಗದಲ್ಲಿ ಓದುತ್ತಿರುವ ಕ್ರೀಡಾಪಟುಗಳು ವಾರ್ಷಿಕ ಪರೀಕ್ಷೆಗೂ ಮುನ್ನ ಏರ್ಪಡಿಸುವ 20 ದಿನಗಳ ವಿಶೇಷ ತರಬೇತಿ ಕಾರ್ಯಕ್ರಮದಲ್ಲಿ ಭಾಗವಹಿಸಬೇಕು ಎಂದರು.